ಶ್ರೀ ಕೆ. ಅಮರನಾಥಶೆಟ್ಟಿ.— ಡಾಕ್ಯುಮೆಂಟ್ ಕೊಟ್ಟಿದ್ದವರಿಗೆ ಪರಿಹಾರ ಕೊಟ್ಟಿದ್ದಾರೆ, ಡಾಕ್ಯುಮೆಂಟ್ಸ್ ಕೊಡದೆ ಇರುವವರಿಗೆ ಪರಿಹಾರ ಕೊಟ್ಟಿಲ್ಲ.

ಶ್ರೀ ಪ್ರತಾಪಚಂದ್ರಶೆಟ್ಟಿ.— ಬೆಳಗಾಂ ಜಿಲ್ಲೆಯಲ್ಲಿ ಸುಮಾರು ಳಳಿಜಿ ದೇವಸ್ಥಾನಗಳು ಗುಲ್ಬರ್ಗ ಜಿಲ್ಲೆಯಲ್ಲಿ ೩೫೯೬ ದೇವಸ್ಥಾನಗಳು ಇವೆ. ಅದೇ ರೀತಿ ೨೦ ಜಿಲ್ಲೆಗಳಲ್ಲಿರತಕ್ಕಂಥ ಎಲ್ಲಾ ದೇವಸ್ಥಾನಗಳಿಗೂ ಪ್ರವಾಸ ಮಾಡಿದ್ದೀರಾ ಹೇಗೆ ಅಥವಾ ವರ್ಷದ ೩೬೫ ದಿವಸವೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಪ್ರವಾಸ ಮಾಡಿದ್ದೀರಾ ಹೇಗೆ ಎಂಬುದನ್ನು ತಿಳಿಸಬೇಕು?

ಶ್ರೀ ಕೆ. ಅಮರನಾಥಶೆಟ್ಟಿ.— ಬಹುತಃ ನಾನು ಹೋದಷ್ಟು ದೇವಸ್ಥಾನಗಳಿಗೆ ತಾವು ಹೋಗಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ದೇವಸ್ಥಾನಗಳಿಗೂ ಹೋಗಿದ್ದೇನೆ ಬೇರೆ ಜಿಲ್ಲೆಯ ದೇವಸ್ಥಾನಗಳಿಗೂ ಹೋಗಿದ್ದೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.— ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.— ತಾವು ನಾಲ್ಕು ಸಾರಿ ಪ್ರಶ್ನೆ ಕೇಳಿದ್ದೀರಿ ದಯವಿಟ್ಟು ಕುಳಿತುಕೊಳ್ಳಿ. ಬೇಕಾದರೆ ತಾವು ಅರ್ಧ ಗಂಟೆಯ ಚರ್ಚೆಗೆ ನೋಟೀಸ್ ಕೊಡಿ ನೋಡೋಣ.

ಅಧ್ಯಕ್ಷರು.— ಪ್ರಶ್ನೆ ಸಂಖ್ಯೆ. ೨೭೪(೧೨೫೩) ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲಾಗಿದೆ.

## ಹೊನ್ನಾಳಿ ತಾಲ್ಲೂಕಿನಲ್ಲಿ ಬರಗಾಲ

೧೦೯೯. ಶ್ರೀ ಡಿ.ಜಿ. ಬಸವನಗೌಡ (ಹೊನ್ನಾಳಿ).— ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿಸಂವರೆ?

ಅ) ಹೊನ್ನಾಳಿ ತಾಲ್ಲೂಕು ಸತತವಾಗಿ ನಾಲ್ಕು ವರ್ಷಗಳಿಂದ ಬರಗಾಲದ ಬವಣೆಗೆ ತುತ್ತಾಗಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹೊನ್ನಾಳಿ ತಾಲ್ಲೂಕಿನಲ್ಲಿ ಕಳೆದ ವರ್ಷ ಬರಗಾಲಕ್ಕೆ ತುತ್ತಾದ ಗ್ರಾಮಗಳ ಸಂಖ್ಯೆ ಎಷ್ಟು?

ಇ) ಪರಿಹಾರದ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ಹೌದು.

ಆ) ೧೬೮

ಇ) ಉದ್ಯೋಗ ಸೃಜನೆ, ಕುಡಿಯುವ ನೀರಿನ ಸುಧಾರಣೆ ಅಥವಾ ಪೂರೈಕೆ ಮತ್ತು ಮೇವು ಪೂರೈಕೆ, ಕೃಷಿ ಬೀಜ ವಿತರಣೆ, ಕಂದಾಯ ಮನ್ನಾ ಮುಂದೂಡುವಿಕೆ ಮುಂತಾದ ಕೆಲವು ವಿಶೇಷ ಕ್ರಮಗಳನ್ನು ಕೈಗೊಂಡಿದೆ.

೧೧.೦೦ ಎ.ಎಂ.

ಶ್ರೀ ಡಿ.ಜಿ. ಬಸವನ ಗೌಡ.— ಮಾನ್ಯ ಅಧ್ಯಕ್ಷರೇ, ಹೊನ್ನಾಳಿ ತಾಲ್ಲೂಕಿನಲ್ಲಿ ಸತತವಾಗಿ ೪ ವರ್ಷಗಳಿಂದ ಬರಗಾಲ ಕಾಣುತ್ತಿದೆ. ಆದರೆ, ಬರಗಾಲ ಪರಿಹಾರ ಕಾಮಗಾರಿಗಳು ಸ್ಥಗಿತಗೊಂಡಿವೆ. ಇನ್ನು ಪಂಡಾದರೂ ಬರಗಾಲ ಪರಿಹಾರ ಕಾಮಗಾರಿಗಳನ್ನು ಕೆಗೆದುಕೊಂಡು ಬಡ ರೈತರಿಗೆ ಅನುಕೂಲ ಮಾಡಿಕೊಡುತ್ತೀರಾ ಎಂದು ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಹೊನ್ನಾಳಿ ತಾಲ್ಲೂಕಿನಲ್ಲಿ ಬರಗಾಲ ಕಾಮಗಾರಿಗಳನ್ನು ಕೈಗೊಂಡು ಸಣ್ಣ ರೈತರುಗಳಿಗೆ ಅನುಕೂಲ ಮಾಡಿಕೊಡಲಾಗಿದೆ. ಪ್ರತಿ ದಿನ ಹೊನ್ನಾಳಿ ತಾಲ್ಲೂಕಿನಲ್ಲಿ ೧೨,೫೬೧ ಜನ ಕೂಲಿ ಕಾರ್ಮಿಕರಿಗೆ ಕೆಲಸ ಕೊಟ್ಟಿದ್ದೇವೆ. ಆ ತಾಲ್ಲೂಕಿನಲ್ಲಿ ಒಂದು ಸಾರಿ ೩೪ ಸಾವಿರ ರೂಪಾಯಿಗಳ ಕಂದಾಯ ಮನ್ನಾ ಮಾಡಿದ್ದೇವೆ. ಇನ್ನೊಂದು ಸಾರಿ ೧೬ ಸಾವಿರ ರೂಪಾಯಿ

ಗಳ ಕಂದಾಯವನ್ನು ಮನ್ನಾ ಮಾಡಿದ್ದೇವೆ. ಇನ್ನೂ ಅವಶ್ಯ ಇದ್ದರೆ ಮನಃ ಹೆಚ್ಚು ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

## ಸಹಕಾರಿ ಕ್ಷೇತ್ರದ ನೌಕರರ ಬಗ್ಗೆ

೧೩೨೯. ಶ್ರೀ ಯು. ಭೂಪತಿ (ಸಂಡೂರು) ಮತ್ತು ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).— ಮಾನ್ಯ ಸಹಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಿಟ್ಟು ಉತ್ತರಿಸುವರೇ?

ಅ) ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ದುಡಿಯುತ್ತಿರುವ ನೌಕರರನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಸದರಿ ವಿಷಯದ ಬಗ್ಗೆ ಸಹಕಾರಿ ಬ್ಯಾಂಕುಗಳ ನೌಕರರ ಸಂಘಗಳಿಂದ ಸರ್ಕಾರಕ್ಕೆ ಮನವಿ ಗಳೇನಾದರೂ ಬಂದಿದೆಯೇ?

ಇ) ಖಾಸಗಿ ಸಹಕಾರಿ ಬ್ಯಾಂಕುಗಳ ನೌಕರರೆಲ್ಲರಿಗೂ ಸಮಾನ ವೇತನ ಹಾಗೂ ಸೇವಾ ಸೌಲಭ್ಯ ಗಳನ್ನು ಒದಗಿಸಲು ಸರ್ಕಾರವು ಕ್ರಮ ಕೈಗೊಂಡಿದೆಯೇ?

ಈ) ಹಾಗಿದ್ದಲ್ಲಿ ಆರ್ಥಿಕ ಮುಗ್ಗಟ್ಟಿನಿಂದಾಗಿ ಮುಚ್ಚುವ ಸ್ಥಿತಿಗೆ ಬಂದಿರುವ ಖಾಸಗಿ ಸಹಕಾರಿ ಬ್ಯಾಂಕುಗಳ ನೌಕರರಿಗೆ ಪರಿಹಾರವನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್. ವಿಶ್ವಾನಾಥಯ್ಯ (ಸಹಕಾರ ಸಚಿವರು).—

ಅ) ಇಲ್ಲ.

ಆ) ಇಲ್ಲ.

ಇ) ಸಹಕಾರ ಬ್ಯಾಂಕುಗಳ ನೌಕರರ ವೇತನ ಹಾಗೂ ಸೇವಾ ಸೌಲಭ್ಯಗಳನ್ನು ಆಯಾ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿಯನ್ನು ಅನುಸರಿಸಿ ಸಹಕಾರ ಸಂಘಗಳ ನಿಯಮಗಳು ೧೯೬೦ರ ನಿಯಮ ೧೭ ಮತ್ತು ೧೮ರಂತೆ ಒದಗಿಸುವ ಬಗ್ಗೆ ನಿಬಂಧಕರು ಕ್ರಮ ತೆಗೆದುಕೊಳ್ಳಲು ಅಧಿಕಾರ ಹೊಂದಿರುತ್ತಾರೆ.

ಈ) ಇಂತಹ ಪ್ರಕರಣಗಳು ಇದುವರೆವಿಗೂ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ ಗಮನಕ್ಕೆ ತಂದರೆ ಕಾನೂನು ಪ್ರಕಾರ ಸರ್ಕಾರ ಕ್ರಮ ತೆಗೆದುಕೊಳ್ಳಲು ಪರಿಶೀಲಿಸುತ್ತದೆ.

ಶ್ರೀ ಬಿ. ಎಂ. ಇದಿನಬ್ಬ.— ಮಾನ್ಯ ಅಧ್ಯಕ್ಷರೇ, ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ದುಡಿಯುತ್ತಿರುವ ನೌಕರರುಗಳನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ಎಂದು ಕೇಳಿದ್ದರೆ, ಇಲ್ಲ ಎಂದು ಹೇಳಿದ್ದಾರೆ. ಸರ್ಕಾರಿ ನೌಕರರಿಗೆ ಯಾವ ರೀತಿ ಕಾನೂನು, ನಿಬಂಧನೆಗಳು ಇವೆಯೋ ಅದೇ ಕಾನೂನು ನಿಬಂಧನೆಗಳು ಸಹಕಾರಿ ಕ್ಷೇತ್ರದಲ್ಲಿ ದುಡಿಯುತ್ತಿರುವ ನೌಕರರುಗಳಿಗೂ ಅನ್ವಯವಾದ ಹಾಗೆ ಅವರುಗಳನ್ನು ಸರ್ಕಾರಿ ನೌಕರರಾಗಿ ಪರಿಗಣಿಸದಿದ್ದರೆ ಅವರಿಗೆ ಅನ್ಯಾಯವಾಗುವುದಿಲ್ಲವೆ?

ಶ್ರೀ ಹೆಚ್. ವಿಶ್ವಾನಾಥಯ್ಯ.— ಮಾನ್ಯ ಅಧ್ಯಕ್ಷರೇ, ಸಹಕಾರಿ ಸಂಘ ಸಂಸ್ಥೆಗಳು ಸ್ವಾಯತ್ತ ಸಂಸ್ಥೆಗಳಾಗಿ ಕೆಲಸ ಮಾಡುತ್ತಿವೆ. ಅವುಗಳ ಆಡಳಿತವನ್ನು ನಿಯಂತ್ರಿಸಿಕೆವುದಕ್ಕೋಸ್ಕರ ಸರ್ಕಾರ ಕಾನೂನುಗಳನ್ನು ರಚನೆ ಮಾಡಿದೆ. ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುವ ನೌಕರರುಗಳನ್ನು ನೇಮಕ ಮಾಡುವುದಕ್ಕೆ ಮತ್ತು ಅವರ ಸೇವಾ ನಿಯಮಗಳಿಗೆ ಪ್ರತ್ಯೇಕವಾದಂಥ ನಿಯಮಗಳು ಮತ್ತು ಕಾನೂನುಗಳು ಇವೆ. ಆಯಾ ಸಹಕಾರಿ ಸಂಘಗಳ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಅಲ್ಲಿ ಕೆಲಸ ಮಾಡುವ ನೌಕರರುಗಳಿಗೆ ಸಂಬಳ ಕೊಡಲಾಗುತ್ತದೆ. ಸರ್ಕಾರದಿಂದ ಅವರಿಗೆ ಸಂಬಳ ಸಾರಿಗೆ ಕೊಡುವುದಿಲ್ಲವಾದ್ದರಿಂದ ಆ ನೌಕರರುಗಳನ್ನು ಸರ್ಕಾರಿ ನೌಕರರುಗಳೆಂದು ಪರಿಗಣಿಸುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ಎಂ. ಇದಿನಬ್ಬ.— ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ನೌಕರರುಗಳು ತಮ್ಮನ್ನು ಸರ್ಕಾರಿ ನೌಕರರುಗಳೆಂದು ಪರಿಗಣಿಸಬೇಕೆಂದು ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ